KABK200000352025

<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ</u>

<u>ನ್ಯಾಯಾಲಯ, ಮುಧೋಳ</u>

ಉಪಸ್ಥಿತರು: ಶ್ರೀ ವಿಜಯಕುಮಾರ ಕನ್ನೂರು,
ಬಿ.ಎ.ಎಲ್.ಎಲ್.ಬಿ. (ಸ್ಪೇಷಲ್)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಮುಧೋಳ.

VIJAYAKUMAR KANNUR Digitally signed by VIJAYAKUMAR KANNUR Date: 2025.08.19 16:29:15 +0530

<u>ದಿನಾಂಕ: 18 ನೇ ಆಗಸ್ಟ 2025</u>

<u>ಅಸಲು ದಾವೆ ನಂ.7/2025</u>

ವಾದಿ : 1. ಶ್ರೀಮತಿ. ಶೋಭಾ ಗಂಡ ಭೀಮಪ್ಪ ಪೋಳ,
ವಯಾ: 38 ವರ್ಷ, ಉ: ಒಕ್ಕಲುತನ ಮತ್ತು ಮನೆಗೆಲಸ,
ಸಾಃ ಮುಗಳಖೋಡ, ತಾಃ ಮುಧೋಳ, ಜಿಃ ಬಾಗಲಕೋಟ,
ಮತ್ತು ಇತರರು.

(ವಾದಿ ಪರ ಶ್ರೀ.ಎಸ್.ಎಸ್.ಡಿ., ವಕೀಲರು)

// ವಿರುದ್ಧ //

ಪ್ರತಿವಾದಿಯರು :1. ಶ್ರೀ. ಪ್ರಕಾಶ ತಂದೆ ಹಣಮಂತ ಪೋಳ,
ವಯಾ: 40 ವರ್ಷ, ಉ: ಒಕ್ಕಲುತನ,
ಸಾಃ ಮುಗಳಖೋತ, ತಾಃ ಮುಧೋಳ, ಜಿಃ ಬಾಗಲಕೋಟ
ಮತ್ತು ಇತರರು.

(ಪ್ರತಿವಾದಿಯರ ಪರ ಶ್ರೀ.ಎಸ್.ಎಸ್.ಜೆ ವಕೀಲರು)

ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ಆದೇಶ

ಈ ಮಧ್ಯಂತರ ಅರ್ಜಿ ಸಂಖ್ಯೆಃ 3 ಅನ್ನು ಪ್ರತಿವಾದಿಯರ ಪರ ವಕೀಲರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ), (ಬಿ) ಮತ್ತು (ಡಿ)ರ ಸಹ ಕಲಂ.151 ರಡಿಯಲ್ಲಿ ಸಲ್ಲಿಸಿ, ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ಹೇಳಿರುವ ಕಾರಣಗಳಿಂದಾಗಿ ಈ ದಾವೆಗೆ ಕಾನೂನುಬದ್ದವಾದ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ ಮತ್ತು ಈ ದಾವೆಯನ್ನು ಅಧಿವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿ ಇರುವುದಿಲ್ಲ ಹಾಗೂ ನಿರ್ಧಿಷ್ಟ ಪರಿಹಾರ ಅಧಿನಿಯಮದಿಂದ ಪ್ರತಿಷೆದಿತವಾಗಿರುವುದು ಎಂದು ಹೇಳಿ ವಾದಿಯರ ವಾದ ಪತ್ರವನ್ನು ತಿರಸ್ಕರಿಸುವಂತೆ ವಿನಂತಿಸಿಕೊಂಡಿರುವರು.

2. ಈ ಮಧ್ಯಂತರ ಅರ್ಜಿಗೆ ಪ್ರತಿವಾದಿ 1 ರವರು ಪ್ರಮಾಣಪತ್ರ ಸಲ್ಲಿಸಿರುವರು, ಪ್ರಮಾಣ ಪತ್ರದಲ್ಲಿ ಹೇಳುವುದೇನೆಂದರೆ ವಾದಿಯರು ದಾವಾ ಆಸ್ತಿಗೆ ಸಂಬಂದಪಟ್ಟಂತೆ ಘೊಷಣಾತ್ಮಕ ಹಾಗೂ ಶಾಶ್ವತ ನಿರ್ಬಂದಕ್ಕ ಆಜ್ಞೆಗಾಗಿ ಮತ್ತು ಪರ್ಯಾಯವಾಗಿ ಸ್ವಾದಿನ ಪಡೆದುಕೊಳ್ಳುವ ಸಲುವಾಗಿ ಈ ದಾವೆಯನ್ನು ದಾಖಲು ಮಾಡಿರುವರು. ಅದೇರೀತಿ ತಹಶೀಲ್ದಾರ ಮುಧೋಳ ಇವರು ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿನ ಪ್ರತಿವಾದಿ 5 ರವರು ಹೆಸರನ್ನು ತೆಗೆದು ಹಾಕುವಂತೆ ಹಾಗೂ ಪ್ರತಿವಾದಿ 1 ರಿಂದ 4 ರವರ ವಿರುದ್ದ ನಿರ್ಭಂದಕಾಜ್ಞೆಗಾಗಿ ಕೋರಿ ಈ ದಾವೆ ದಾಖಲು ಮಾಡಿರುವರು. ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವಂತೆ ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ ಈ ದಾವೆಯು ನಿರ್ದಿಷ್ಟ ಪರಿಹಾರ ಕಾನೂನುನಿಂದ ಪ್ರತಿಷೇದಿತವಾಗಿದ್ದು, ವಾದಿಯು ದಾವಾ ಆಸ್ತಿಗಳ ಕಬ್ಜೆಯನ್ನು ಹೊಂದಿರುವುದಿಲ್ಲ. ಆದ್ದರಿಂದ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಈ ದಾವೆಗೆ ಯಾವುದೇ ವ್ಯಾಜ್ಯಕಾರಣ ಉಂಟಾಗಿರುವುದಿಲ್ಲ. ಆದ್ದರಿಂದ ಈ ಮಧ್ಯಂತರ ಅರ್ಜಿ 3 ರಲ್ಲಿ ಹೇಳಿರುವಂತೆ ವಾದಿಯುರು ಯಾವುದೇ ಪರಿಹಾರವನ್ನು ಪಡೆಯಲು ಅರ್ಹವಾಗಿರುವುದಿಲ್ಲ. ಆದ್ದರಿಂದ ವಾದಿಯರ ದಾವೆಯ ವಾದಪತ್ರವನ್ನು ತೀರಸ್ಕರಿಸುವಂತೆ ವಿನಂತಿಸಿಕೊಂಡಿರುವರು.

3. ವಾದಿಯರು ಮಧ್ಯಂತರ ಅರ್ಜಿ ಸಂಖ್ಯೆ: 3 ಕ್ಕೆ ಸಲ್ಲಿಸಿದ ತಕರಾರಿನ ಸಂಕ್ಷಿಪ್ತ ಸಾರಾಂಶ:

ಈ ಮಧ್ಯಂತರ ಅರ್ಜಿಯು ಕಾನೂನಿಂದಾಗಲೀ, ಸಂಗತಿಯಿಂದಾಗಲೀ ಊರ್ಜಿತವಾಗಿರುವುದಿಲ್ಲ. ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ವಾದ ಪತ್ರವನ್ನು ತಿರಸ್ಕರಿಸಲು ಯಾವುದೇ ಸಮಂಜಸವಾದ ಕಾರಣಗಳನ್ನು ಪ್ರತಿವಾದಿಯರು ಹೇಳಿರುವುದಿಲ್ಲ. ವಾದಿಯ ಹಕ್ಕನ್ನು ನಿರಾಕರಿಸುವ ಸಲುವಾಗಿ ಈ ರೀತಿಯಾದ ಮಧ್ಯಂತರ ಅರ್ಜಿಯನ್ನು ದಾಖಲು ಮಾಡಿರುವರು. ಈ ಮಧ್ಯಂತರ ಅರ್ಜಿಗೆ ಲಗತ್ತಿಸುರುವ ಪ್ರಮಾಣ ಪತ್ರದ ಖಂಡಿಕೆ 3 ಮತ್ತು 4 ರಲ್ಲಿ ಹೇಳಿರುವ ಸಂಗತಿಗಳು ನಿಜ ಇರುವುದಿಲ್ಲ. ವಾದಿಯರು ವಾದ ಪತ್ರದಲ್ಲಿ ಹೇಳಿರುವಂತೆ ವ್ಯಾಜ್ಯ ಕಾರಣಗಳ ಬಗ್ಗೆ ರುಜುವಾತುಪಡಿಸಬೇಕಾದರೆ ಸಾಕ್ಷಾಧಾರಗಳ ಅವಶ್ಯಕತೆ ಇರುವುದು. ವಾದಿಯರು ಈ ದಾವೆಗೆ ವ್ಯಾಜ್ಯ ಕಾರಣ ಉಂಟಾದ ಬಗ್ಗೆ ವಾದ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿರುವವರು. ವಾದಿಯರಿಗೆ ತೊಂದರೆ ನೀಡುವ ಸಲುವಾಗಿ ಈ ರೀತಿಯಾದ ಮಧ್ಯಂತರ ಅರ್ಜಿಯನ್ನು ದಾಖಲು ಮಾಡಿದ್ದು, ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲ ಸಂಗತಿಗಳು ನಿಜವಿರುವುದಿಲ್ಲ. ಒಂದು ವೇಳೆ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ವಾದಪತ್ರವನ್ನು ತಿರಸ್ಕರಿಸಿದಲ್ಲಿ ವಾದಿಯರಿಗೆ ತುಂಬಲಾರದ ಹಾನಿ ವ ನಷ್ಟ ಉಂಟಾಗುವುದು. ವಾದಿಯುರು ಈ ದಾವೆಯನ್ನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಘೋಷನಾತ್ಮಕ ಮತ್ತು ಶಾಶ್ವತ ನಿರ್ಭಂದಕಾಜ್ಞೆಗಾಗಿ ಕೋರಿ ದಾಖಲು ಮಾಡಿದ್ದು, ಪ್ರತಿವಾದಿ 1 ರಿಂದ 4 ರವರು ದಾವಾ ಆಸ್ತಿಯ ಉಪಭೋಗಕ್ಕೆ ಅಡತಡೆಯನ್ನು ಉಂಟು ಮಾಡಿರುವುದರಿಂದ ಈ ದಾವೆಗೆ ವಾಜ್ಯ ಕಾರಣ ಉಂಟಾಗಿರುವುದು. ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ಖರ್ಚುಸಹಿತ ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುವರು.

4. ಉಭಯ ವಕೀಲರ ವಾದವನ್ನು ಆಲಿಸಲಾಯಿತು. ವಾದಿಯರ ಪರ ವಕೀಲರು ತಮ್ಮ ವಾದಕ್ಕೆ ಪೂರಕವಾಗಿ ಈ ಕೆಳಕಂಡ ತೀರ್ಪುಜನ್ಯ ಕಾನೂನುಗಳನ್ನು ಅವಲಂಬಿಸಿರುವರು.

1. 2022 LIVE LAW (SC) 963 Gurudevsingh V/s Haravindrasingh

2. Civil Appeal 1673 /2008 (SC) Purnaram V/s Baburam and others

5. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನನ್ನ ಅವಗಾಹನೆಗೆ ಉದ್ಭವಿಸುವುವು.

ಅಂಶಗಳು

1. ಮಧ್ಯಂತರ ಅರ್ಜಿ ಸಂಖ್ಯೆ:3 ನ್ನು ಪುರಸ್ಕರಿಸಲು ಸಾಕಷ್ಟು ಸಮಂಜಸವಾದ ಕಾರಣಗಳು ಇರುವವು ಎಂಬುದನ್ನು ಪ್ರತಿವಾದಿಯರು ರುಜುವಾತುಪಡಿಸುವರೇ?
2. ಏನು ಆದೇಶ ?

6. ಮೇಲೆ ಹೇಳಿದ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 1: ನಕಾರಾತ್ಮಕವಾಗಿ.
ಅಂಶ 2: ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ...

<u>ಕಾರಣಗಳು</u>

7. <u>ಅಂಶ 1</u> : ಪ್ರಸ್ತೂತ ಮೊಕದ್ದಮೆಯಲ್ಲಿ ಅನುಸೂಚಿತ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಯರು ಘೋಷನಾತ್ಮಕ ಹಾಗೂ ನಿರ್ಭಂದಕಾಜ್ಞೆಗಾಗಿ ಹಾಗೂ ಪರ್ಯಾವಾಗಿ ದಾವಾ ಆಸ್ತಿಯ ಸ್ವಾಧೀನ ಪಡೆದುಕೊಳ್ಳುವ ಸಲುವಾಗಿ ವಾದಿಯುರು ಈ ದಾವೆಯನ್ನು ದಾಖಲು ಮಾಡಿರುವರು. ಆದರೆ ಪ್ರತಿವಾದಿಯರು ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವಂತೆ ಈ ದಾವೆಗೆ ಯಾವುದೇ ವಾಜ್ಯ ಕಾರಣ ಉಂಟಾಗಿರುವುದಿಲ್ಲ ಹಾಗೂ ನಿರ್ದೀಷ್ಟ ಪರಿಹಾರ ಅಧಿನಿಯಮದ ಪ್ರಕಾರ ವಾದಿಯರ ದಾವೆಯು ಕಾನೂನಿನ ಅಡಿಯಲ್ಲಿ ಉರ್ಜಿತ ವಾಗಿರುವುದಿಲ್ಲ. ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ವಾದ ಪತ್ರವನ್ನು ತಿರಸ್ಕರಿಸಬೇಕೆಂದು ಈ ಮಧ್ಯಂತರ ಅರ್ಜಿ 3 ರಲ್ಲಿ

ಹೇಳಿರುವರು. ಪ್ರಸ್ತುತ ದಾವೆಯಲ್ಲಿ ವಾದಿಯರು ವಾದ ಪತ್ರದಲ್ಲಿ ಹೇಳಿರುವಂತೆ ಕುಟುಂಬದ ಮೂಲಪುರುಷ ಮೃತ ಹಣಮಂತರಾವ ಈತನ ಹೆಂಡತಿ ಪ್ರತಿವಾದಿ 5 ಇವರಿಗೆ ಹತ್ತು ಜನ ಮಕ್ಕಳಿದ್ದು ಅವರಲ್ಲಿ ಮೃತ ಬಿಮಪ್ಪ , ಪ್ರತಿವಾದಿ 1 ರಿಂದ 4 ಒಟ್ಟು 5 ಜನ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳಿರುವರು. ವಾದಿಯರು ಮೃತ ಭೀಮಪ್ಪನ ಹೆಂಡತಿ ಮತ್ತು ಮಕ್ಕಳಾಗಿರುವರು. ದಾವಾ ಜಮಿನು ಮೃತ ಭೀಮಪ್ಪನಿಗೆ ತಹಶಿಲ್ದಾರ ಮುಧೋಳರವರು ದಿನಾಂಕಃ 30.05.2003 ರಂದು ಹಕ್ಕು ಮಂಜೂರ ಮಾಡಿದ್ದು, ಆ ಪ್ರಕಾರ ದಾವಾ ಆಸ್ತಿಯಲ್ಲಿ ಪೊಡಿ ಸಹ ಆಗಿರುವುದು. ಭೀಮಪ್ಪ ದಿನಾಂಕಃ 18.11.2014 ರಂದು ಮುಗಳಖೋಡ ಗ್ರಾಮದಲ್ಲಿ ವಾದಿ 1 ರಿಂದ 4 ರವರನ್ನು ತನ್ನ ಮೊದಲನೇ ವರ್ಗದ ಕಾನೂನುಬದ್ದ ವಾರಸದಾರರಾಗಿ ಬಿಟ್ಟು ಮೃತಪಟ್ಟಿರುವನು, ಆದರೆ ಪ್ರತಿವಾದಿ 1 ರಿಂದ 4 ರವರು ತಮ್ಮ ರಾಜಕೀಯ ಪ್ರಭಾವವನ್ನು ಬೀರಿ ಪ್ರತಿವಾದಿ 5 ರವರ ಹೆಸರನ್ನು ದಾವಾ ಆಸ್ತಿಯ ಕಂದಾಯ ಪಹಣಿ ಪಿತ್ರಿಕೆಯಲ್ಲಿ ದಾಖಾಲ ಮಾಡಿಸಿರುವರು. ಆದರೆ ದಾವಾ ಆಸ್ತಿಗೆ ವಾದಿಯರು ಮಾತ್ರ ಜಂಟಿ ಮಾಲೀಕರು ಮತ್ತು ಕಬ್ಜದಾರರಾಗಿರುವರು. ಈ ದಾವೆಗೆ ಪ್ರತಿವಾದಿಯರು 2024 ರ ಡಿಸೆಂಬರ ತಿಂಗಳಿನ 5 ಮತ್ತು 12 ನೇ ತಾರೀಖಿನಂದು ವಾದಿಯರ ದಾವಾ ಆಸ್ತಿಯ ಶಾಂತಿಯುತ ಕಬ್ಜಾವಹಿವಾಟಿಗೆ ಅಡೆತಡೆ ಉಂಟುಮಾಡಿರುವುದರಿಂದ ಈ ದಾವೆಗೆ ವಾಜ್ಯಕಾರಣ ಉಂಟಾಗಿರುವುದಾಗೆಂದು ಹೇಳಿ ಈ ದಾವೆಯನ್ನು ದಾಖಲು ಮಾಡಿರುವರು. ಆದರೆ ಪ್ರತಿವಾದಿಯರು ತಮ್ಮ ಈ ಮಧ್ಯಂತರ ಅರ್ಜಿಯಲ್ಲಿ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ನಿರಾಕರಿಸಿರುವುದಿಲ್ಲ.

8. ಸಿವಿಲ್ ಪ್ರಕ್ರಿಯಾ ಸಂಹಿತೆ 7 ನೇ ಕ್ರಮಾದೇಶ 11 ನೇ ನಿಯಮದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾಡಿದ ವಾದಪತ್ರದ ತಿರಸ್ಕರಣೆಯು ಒಂದು ಸಿವಿಲ್ ಕ್ರಮವನ್ನು

ಪ್ರಾರಂಭದಲ್ಲಿಯೇ ಅಂದರೆ, ದಾವೆಯ ಅಧಿವಿಚಾರಣೆ ನಡೆಸದೆ ಮುಕ್ತಾಯಗೊಳಿಸಲು ನ್ಯಾಯಾಲಯಕ್ಕೆ ಪ್ರದತ್ತವಾದ ತೀವ್ರ ಪರಿಣಾಮದ ಅಧಿಕಾರವಾಗಿದ್ದು, ಸದರಿ ಅಧಿಕಾರವನ್ನು ಚಲಾಯಿಸುವುದಕ್ಕೆ ಮುಂಚಿನ ಷರತ್ತುಗಳನ್ನು ಕಟ್ಟುನಿಟ್ಟಾಗಿ ಅನ್ವಯಿಸತಕ್ಕದ್ದು.

9. ಮಾನ್ಯ ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯಗಳು ವಿಧಿಸಿದ ಕಾನೂನಿನ ಅನುಪಾತದ ದೃಷ್ಟಿಯಿಂದ, ವಾದಪತ್ರವು ವ್ಯಾಜ್ಯ ಕಾರಣವನ್ನು ಬಹಿರಂಗಪಡಿಸುತ್ತದೆಯೇ? ಅಥವಾ ದಾವೆಯನ್ನು ಯಾವುದೇ ಕಾನೂನಿನಡಿ ಪ್ರತಿಬಂಧಿಸಲಾಗಿದೆಯೇ? ಎಂಬುದನ್ನು ತಿಳಿಯಲು, ಒಟ್ಟಾಗಿ ಓದಬೇಕಾಗಿರುವುದು ವಾದಪತ್ರದಲ್ಲಿನ ದೃಢೋಕ್ತಿಗಳನ್ನು ಎನ್ನಲಾಗಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆ 7 ನೇ ಕ್ರಮಾದೇಶದ 11 ನೇ ನಿಯಮದಡಿಯಲ್ಲಿನ ಅಧಿಕಾರವನ್ನು ಚಲಾಯಿಸುವ ಹಂತದಲ್ಲಿ, ಲಿಖಿತ ಹೇಳಿಕೆಯಲ್ಲಿ ಅಥವಾ ವಾದಪತ್ರದ ತಿರಸ್ಕರಣೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ನಿರೂಪಿಸಲಾದ ಪ್ರತಿವಾದಿಯ ವಾದವು ಅಷ್ಟೇನೂ ಮಹತ್ವದ್ದಲ್ಲ. ವಾದಪತ್ರದಲ್ಲಿನ ದೃಢೋಕ್ತಿಗಳು ಸ್ಪಷ್ಟವಾಗಿ ವ್ಯಾಜ್ಯಕಾರಣವನ್ನು ಬಹಿರಂಗಪಡಿಸದಿದ್ದಲ್ಲಿ ಅಥವಾ ದಾವೆಯು ಯಾವುದೇ ಕಾನೂನಿನಡಿ ಪ್ರತಿಷೇಧಿತವಾಗುವುದೆಂದು ಕಂಡುಬಂದಲ್ಲಿ ಮಾತ್ರ ವಾದಪತ್ರವನ್ನು ತಿರಸ್ಕರಿಸಬಹುದಾಗಿದೆ. ಇಲ್ಲದಿದ್ದಲ್ಲಿ, ಪಕ್ಷಕಾರರ ವಾದವನ್ನು ಅಧಿವಿಚಾರಣೆ ಮಾಡುವ ಮೂಲಕ ನ್ಯಾಯನಿರ್ಣಯ ಮಾಡಬೇಕಾಗುತ್ತದೆ.

10. ಆದ್ದರಿಂದ ವಾದಿಯ ದಾವೆಯು ನಿರ್ದಿಷ್ಟ ಪರಿಹಾರ ಅಧಿನಿಯಮದ ಪ್ರಕಾರ ಹಾಗೂ ಕಾಲಪರಿಮಿತ ಅಧಿನಿಯಮದ ಪ್ರಕಾರ ವಾದಿಯ ದಾವೆಯು ಪ್ರತಿಷೇದಿತವಾಗಿರುವುದಾಗೆಂದು ಹೇಳಿರುವರು ಎಂಬ ಕಾರಣ ಮಾತ್ರಕ್ಕೆ ವಾದಿಯ ದಾವೆಯು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-7 ನಿಯಮ-11 (ಎ),(ಬಿ) ಮತ್ತು (ಡಿ) ಅಡಿಯಲ್ಲಿ ಪ್ರತಿಷೇಧಿತವಾಗಿರುವುದಿಲ್ಲ. ಏಕೆಂದರೆ ವಾದಪತ್ರದಲ್ಲಿನ ಸಂಗತಿಗಳನ್ನು ಪರಿಶೀಲಿಸಿದಾಗ ಮಾತ್ರ ವಾದಿಯ ದಾವೆಯು ಕಾನೂನಿನಡಿಯಲ್ಲಿ ತಿರಸ್ಕರಿಸಲು ಅವಕಾಶ ಇರುವುದು. ಸಿವಿಲ್ ಪ್ರಕ್ರಿಯಾ ಸಂಹಿತೆ 7 ನೇ ಕ್ರಮಾದೇಶದ 11(ಎ),(ಬಿ) ಮತ್ತು (ಡಿ)ನೇ ನಿಯಮದಡಿ ವಾದವನ್ನು ಪರಿಗಣಿಸುವಾಗ, ವಾದಪತ್ರದಲ್ಲಿನ ವಾದವನ್ನು ಪರಿಗಣಿಸುವುದು ನ್ಯಾಯಾಲಯದ ಕರ್ತವ್ಯವಾಗಿದೆ ಎಂಬುವಷ್ಟರ ಮಟ್ಟಿಗೆ ನ್ಯಾಯಾಲಯವು ವಾದ

ಪತ್ರದಲ್ಲಿನ ದೃಢೋಕ್ತಿಗಳನ್ನು ಮಾತ್ರ ಪರಿಶೀಲಿಸಬೇಕಾಗುತ್ತದೆಯೆಂದು ಮತ್ತು ಲಿಖಿತ ಹೇಳಿಕೆಯಲ್ಲಿ ಅಥವಾ ವಾದಪತ್ರದ ತಿರಸ್ಕರಣೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಮಾಡಲಾದ ದೃಢೋಕ್ತಿಗಳು ಮುಖ್ಯವಲ್ಲವೆಂದು ಹಾಗೂ ಆ ಹಂತದಲ್ಲಿ ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿಯರು ಮಂಡಿಸಿದ ಪ್ರತಿವಾದವು ಪೂರ್ತಿ ಅಸಂಗತವಾಗಿದೆಯೆಂಬುದು ಆದ್ದರಿಂದ ಈ ದಾವೆಗೆ ಸಂಬಂಧಪಟ್ಟಂತೆ ವಾದ ಪತ್ರದಲ್ಲಿ ವಾದಿಯ ಈ ದಾವೆಗೆ ವಾಜ್ಯ ಕಾರಣ ದಿನಾಂಕ: 01.04.2023 ರಂದು ಪ್ರತಿವಾದಿಯರು ಪಾಲು ವಿಭಾಗ ಮಾಡಿಕೊಡಲು ನಿರಾಕರಿಸಿರುವುದರಿಂದ ಈ ದಾವೆಯನ್ನು ದಾಖಲು ಮಾಡಿರುವರು. ಆದ್ದರಿಂದ ಈ ಹಂತದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ತೀರ್ಪುಜನ್ಯ ಕಾನೂನು ಆದ LIVERPOOL AND LONDON S.P AND I ASSOCIATION LTD., Vs M.V SEA SUCCESS I AND ANOTHER

> *"G. Civil Procedure Code 1908 – or. 7Rr.11(a) and 14 – Rejection of plaint – Whether plaint disclosed a cause of action – Held, is a question of fact to be determined by reading the averments made in the plaint in their entirety – Test to determine the question – if averments made in the plaint or documents relied upon disclose a cause of action, plaint should not be rejected merely on ground that the averments are not sufficient to prove the facts stated therein – For disposal of application under R.11(a), documents filed under R.14 must be taken into consideration".*

11. ಆದ್ದರಿಂದ ಈ ಮೇಲೆ ಹೇಳಿದ ತೀರ್ಪುಜನ್ಯ ಕಾನೂನಿನಿಂದ ವಾದಿಯು ಹಾಜರುಪಡಿಸಿರುವ ದಾಖಲೆಯ ಪ್ರಕಾರ ಈ ದಾವೆಗೆ ವ್ಯಾಜ್ಯ ಕಾರಣ ಉಂಟಾಗಿರವುದು ಸ್ಪಷ್ಟವಾಗುವುದು. ಅದೇರೀತಿ ಪ್ರತಿವಾದಿಯರು ವಾದಿಯರ ದಾವೆಯು ನಿರ್ದಿಷ್ಟ ಪರಿಹಾರ

ಅಧಿನಿಯಮ ಕಾನೂನಿನದ ಪ್ರತಿಷೇದಿತವಾಗಿರುವುದು ಎಂದು ಹೇಳಿರುವರು. ಆದರೆ ಯಾವ ಕಲಮಿನಡಿಯಲ್ಲಿ ಈ ದಾವೆ ಪ್ರತಿಷೇದಿತವಾಗಿರುವುದು ಎಂಬುದರ ಬಗ್ಗೆ ಈ ಮಧ್ಯಂತರ ಅರ್ಜಿಯಲ್ಲಿ ಸ್ಪಷ್ಟವಾಗಿ ಹೇಳಿರುವುದಿಲ್ಲ. ದಾವಾ ಆಸ್ತಿಗೆ ವಾದಿಯರೇ ಮಾತ್ರ ಮಾಲೀಕರು ಅಥವಾ ವಾದಿಯರು ಮತ್ತು ಪ್ರತಿವಾದಿ 5 ರವರು ಸಹ ಜಂಟೀ ಮಾಲೀಕರು ಎಂಬುದನ್ನು ನಿರ್ಧರಿಸಬೇಕಾದರೆ ಸಾಕ್ಷಾಧಾರಗಳ ಅವಶ್ಯಕತೆ ಇರುವುದು. ಆದ್ದರಿಂದ ಈ ಕಾರಣಗಳ ಮೇರೆಗೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಮಂಜಸವಾದ ಕಾರಣಗಳಿರುವುದಿಲ್ಲ. ಆದ್ದರಿಂದ ಈ ಹಂತದಲ್ಲಿ ಈ ಮಧ್ಯಂತರ ಅರ್ಜಿ-3 ನ್ನು ಪುರಸ್ಕರಿಸಲು ಯಾವುದೇ ಸಮಂಜಸ ಕಾರಣಗಳು ಇರುವುದಿಲ್ಲ. ಆದ್ದರಿಂದ ಅಂಶ ನಂ.1 ಅನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

12. <u>ಅಂಶ 2 :</u> ಈ ಮೇಲೆ ಹೇಳಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಃ

<u>ಆದೇಶ</u>

ಪ್ರತಿವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ),(ಬಿ) ಮತ್ತು (ಡಿ) ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆಃ 3 ನ್ನು ವಜಾಗೊಳಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

**(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ಇದೇ ದಿನಾಂಕಃ 18 ನೇ ಆಗಸ್ಟ್ 2025 ದಿನದಂದು ವಿದ್ಯುಕ್ತವಾಗಿ ಘೋಷಿಸಲಾಯಿತು)**

(ವಿಜಯಕುಮಾರ.ಎಮ್.ಕನ್ನೂರು)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮುಧೋಳ.

VIJAYAKUMAR KANNUR
Digitally signed by VIJAYAKUMAR KANNUR
Date: 2025.08.19 16:29:24 +0530